ಕರ್ನಾಟಕ ಸರ್ಕಾರ
Government of karnataka

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ
DEPARTMENT OF STATE EDUCATIONAL RESEARCH AND TRAINING
No 4, 100 FT RING ROAD, BANASHANKARI 3 RD STAGE BENGALURU - 560 085
Email: dpi.dsert-ka@nic.in Website: http://dsert.kar.nic.in

ಡಿಎಸ್ಇಆರ್‌ಟಿ
DSERT

Phone - 080 26980100
Fax - 080 26422377

DSERT:ETC-6/ರೇಡಿಯೋ/ಪಾಠಪ್ರಸಾರ/01/20-21 ದಿ:07-01-2021

## ಸುತ್ತೋಲೆ

ವಿಷಯ: ದಿನಾಂಕ:11-01-21 ರಿಂದ 05-04-21ರವರೆಗೆ 1ರಿಂದ 4ನೇ ತರಗತಿಯ ವಿದ್ಯಾರ್ಥಿಗಳಿಗೆ ರೇಡಿಯೋ ಮೂಲಕ ಪಾಠ ಪ್ರಸಾರ ಮಾಡುತ್ತಿದ್ದು, ವ್ಯಾಪಕ ಪ್ರಚಾರ ನೀಡಿ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವ ಬಗ್ಗೆ.

*****

ಆಕಾಶವಾಣಿ, ಡಿ.ಎಸ್.ಇ.ಆರ್.ಟಿ. ಹಾಗು ಎಸ್.ಎಸ್.ಕೆ ಸಹಯೋಗದಲ್ಲಿ ವಿಶೇಷ ಕಾರ್ಯಕ್ರಮ ಸರಣಿ **"ಕಲಿಯುತ್ತಾ ನಲಿಯೋಣ"** 1 ರಿಂದ 4ನೇ ತರಗತಿಯವರೆಗಿನ ನಲಿಕಲಿ ಹಾಗು ಕಲಿನಲಿ ಮಕ್ಕಳಿಗೆ ರೂಪಿತವಾದ ಈ ಸರಣಿಯಲ್ಲಿ ಮಕ್ಕಳು ಶಾಲೆಯಲ್ಲಿ ಇಲ್ಲವೇ ಮನೆಯಲ್ಲಿಯೇ ಕಲಿಯಲು ಅವಕಾಶ ಇದೆ. ನಾಟಕ, ಸಂಭಾಷಣೆ, ಹಾಡು, ಒಗಟು, ನಿರೂಪಣೆ ಮೂಲಕ ನಲಿ-ಕಲಿಯ ಆಶಯಗಳಾದ ಆಲಿಸುವಿಕೆ, ವಸ್ತು ಗುರುತಿಸುವಿಕೆ, ಸ್ವಕಲಿಕೆ, ಸಂತಸದಾಯಕ ಕಲಿಕೆ, ಶಬ್ಧ ಪರಿಚಯ ಹೀಗೆ ಶಬ್ದಗಳ ಏರಿಳಿತದ ಮೂಲಕ ಕಲಿಸುವ ವಿನೂತನ ಪ್ರಯತ್ನ ಈ ಸರಣಿಯದಾಗಿದ್ದು, ಜನವರಿ 11 2021ರಿಂದ ಏಪ್ರಿಲ್ 05 2021ರವರೆಗೆ ಸೋಮವಾರದಿಂದ ಶುಕ್ರವಾರದವರೆಗೆ ಪ್ರತೀ ದಿನ ಬೆಳಗ್ಗೆ 10 ಗಂಟೆಯಿಂದ 10.15 ನಿಮಿಷದವರೆಗೆ **"ತರಗತಿ 1 ಹಾಗು 2ನೇ ತರಗತಿ ಮಕ್ಕಳಿಗೆ"**, ಹಾಗು 10.15 ನಿಮಿಷದಿಂದ 10.30 ನಿಮಿಷದವರೆಗೆ **"ತರಗತಿ 3 ಹಾಗು 4ನೇ ತರಗತಿ ಮಕ್ಕಳಿಗೆ"** ಪಠ್ಯಾಧಾರಿತ ವಿಷಯಗಳನ್ನು ವಿನೂತನ ಮಾದರಿಯಲ್ಲಿ ತಿಳಿಸುವ ಪ್ರಯತ್ನ ಇದಾಗಿದ್ದು, ನಲಿಕಲಿ ಶಿಕ್ಷಕರು, ಕಲಿನಲಿ ಶಿಕ್ಷಕರು ಹಾಗು ಪೋಷಕರು ಈ ಕಾರ್ಯಕ್ರಮವನ್ನು ಪ್ರತೀ ಮಗುವಿಗೆ ತಲುಪಿಸಲು ಹಾಗು ತಾವೂ ಆಲಿಸಲು ಈ ಮೂಲಕ ತಿಳಿಸಲಾಗಿದೆ.

**ಈ ಕಾರ್ಯಕ್ರಮ ಕೇಳಲು ಹಾಗು ಕೇಳಿಸಲು ಇರುವ ಅವಕಾಶ:**

1. ಈ ಕಾರ್ಯಕ್ರಮ ರಾಜ್ಯದ 13 ಆಕಾಶವಾಣಿ ಕೇಂದ್ರದಿಂದ ಪ್ರಸಾರ.
2. ಬೆಂಗಳೂರಿನಲ್ಲಿ ಆಕಾಶವಾಣಿ ಮತ್ತು M.W 612 Khz ನೊಂದಿಗೆ ವಿವಿಧಭಾರತಿ FM 102.9 mhz ತರಂಗಾಂತರದಲ್ಲೂ ಪ್ರಸಾರವಾಗಲಿದೆ.
3. ಈ ಕಾರ್ಯಕ್ರಮವನ್ನು Prasar Bharathi News on AIR app download ಮಾಡಿ mobileನಲ್ಲಿ ಜಗತ್ತಿನಾದ್ಯಂತ ಕೇಳಬಹುದು.
4. FM ತರಂಗಾಂತರದಲ್ಲಿ ಕೇಳುವ ಶ್ರೋತೃಗಳು ಸಾಧಾರಣ ಮೊಬೈಲ್‌ನಲ್ಲಿಯೂ ಕೇಳಬಹುದು.
5. ಟಿ.ವಿ.ಯಲ್ಲಿ ಡಿ.ಟಿ.ಹೆಚ್.ನಲ್ಲೂ ಸಹ All India Radio ಕೇಳಬಹುದು.
6. Youtube streaming ನಲ್ಲೂ ಕೇಳಬಹುದು.
7. ವಿದ್ಯಾಗಮದಲ್ಲಿ ಶಾಲಾ ಸಮಯದಲ್ಲಿ ಕೇಳುವುದಿದ್ದರೆ ಶಾಲೆಯಲ್ಲಿ ಈಗಾಗಲೇ ನೀಡಿರುವ ರೇಡಿಯೋ ಸುಸ್ಥಿತಿಯಲ್ಲಿಟ್ಟು ಕೇಳಿಸಬಹುದು.

ಇದೆಲ್ಲದರ ಹೊರತಾಗಿ ಈ ಕಾರ್ಯಕ್ರಮದಲ್ಲಿ ಮಕ್ಕಳ ಕಲಿಕಾ ಸಾಮರ್ಥ್ಯ ಪರೀಕ್ಷಿಸಲು ಮಕ್ಕಳ ಪ್ರತಿಭೆ ಗುರುತಿಸುವ ಪ್ರಯತ್ನ ನಡೆಯುತ್ತಿದ್ದು ಕಲಿಸಿದ ಹಾಡು ನಾಟಕವನ್ನು ಸ್ವತಃ ಅಭಿನಯಿಸಿ, **AIR whatsapp No: 9449417612** ಗೆ ಕಳುಹಿಸಿ ಆಯ್ದ ವಿದ್ಯಾರ್ಥಿಗಳು ಪ್ರಶಸ್ತಿ ಪತ್ರ ಪಡೆಯಲು ಅವಕಾಶ ಇದೆ.

ಮಕ್ಕಳ ಕಲಿಕೆ ದೃಢವಾಗಲು ಹಾಗು ಪುನಃ ಪುನಃ ಕೇಳಲು ಮತ್ತು ಅಭಿನಯಿಸಲು ಅನುಕೂಲವಾಗಲೆಂದು AIR, Bangalore, Youtubeನಲ್ಲಿ ಬಿತ್ತರಿಸಲಾದ ಎಲ್ಲಾ ಕಾರ್ಯಕ್ರಮಗಳನ್ನು upload ಮಾಡಲಾಗುತ್ತಿದ್ದು, ಶಿಕ್ಷಕರು ಈ ಯೂಟ್ಯೂಬ್ ಚಾನಲ್‌ನ ಸದುಪಯೋಗ ಮಾಡಿಕೊಳ್ಳಬಹುದು. AIRI ರವರಿಂದಬರುವ ನೋಟಿಫಿಕೇಷನ್ ನಿಮಗೆ ಜಾಗೃತಿ ಮೂಡಿಸುತ್ತದೆ ಹಾಗು ಕೆಲ ಉತ್ತಮ ಮಕ್ಕಳ (whatsapp ಮಾಡಿದ) ಅಭಿನಯ ಸಹ upload ಆಗುತ್ತದೆ ಮತ್ತು ಪ್ರತೀ ಕಾರ್ಯಕ್ರಮಕ್ಕೆ ಅನಿಸಿಕೆ ಅಭಿಪ್ರಾಯ ತಿಳಿಸಲೂ ಸಹ ಇಲ್ಲಿ ಅವಕಾಶ ಇದೆ.

ರೇಡಿಯೋ ಕಾರ್ಯಕ್ರಮ ಕೇಳುತ್ತಿರುವ ಬಗ್ಗೆ ಈ ಕಛೇರಿಗೆ 15 ದಿನಕ್ಕೊಮ್ಮೆ ವರದಿ ಮಾಡಲು ತಿಳಿಸಿದೆ.

ನಿರ್ದೇಶಕರು,
ಡಿ.ಎಸ್.ಇ.ಆರ್.ಟಿ.
ಬೆಂಗಳೂರು.

ಗೆ,

1. ರಾಜ್ಯದ ಎಲ್ಲಾ ಉಪನಿರ್ದೇಶಕರು(ಆಡಳಿತ) ಹಾಗು ಉಪನಿರ್ದೇಶಕರು(ಅಭಿವೃದ್ಧಿ) ರವರಿಗೆ ಅಗತ್ಯ ಕ್ರಮಕ್ಕಾಗಿ.
2. ರಾಜ್ಯದ ಎಲ್ಲಾ ಕ್ಷೇತ್ರ ಶಿಕ್ಷಣಾಧಿಕಾರಿಗಳು ಹಾಗು ಎಲ್ಲಾ ಕ್ಷೇತ್ರ ಸಮನ್ವಯಾಧಿಕಾರಿಗಳಿಗೆ ಉಪನಿರ್ದೇಶಕರು(ಆಡಳಿತ) ರವರ ಮೂಲಕ ಅಗತ್ಯ ಕ್ರಮಕ್ಕಾಗಿ.

ಪ್ರತಿಯನ್ನು,

1. ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು- ಕರ್ನಾಟಕ ಸರ್ಕಾರ ರವರ ಆಪ್ತ ಕಾರ್ಯದರ್ಶಿರವರಿಗೆ ಕಳುಹಿಸುತ್ತಾ, ಮಾನ್ಯ ಸಚಿವರ ಗಮನಕ್ಕೆ ತರಲು ಕೋರಿದೆ.
2. ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
3. ಮಾನ್ಯ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರುರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
4. ಮಾನ್ಯ ರಾಜ್ಯ ಯೋಜನಾ ನಿರ್ದೇಶಕರು, ಸಮಗ್ರ ಶಿಕ್ಷಣ ಕರ್ನಾಟಕ, ನೃಪತುಂಗ ರಸ್ತೆ, ಬೆಂಗಳೂರುರವರಿಗೆ ಗೌರವ ಪೂರ್ವಕವಾಗಿ ಅವಗಾಹನೆಗೆ ಸಲ್ಲಿಸಿದೆ.
5. ಅಪರ ಆಯುಕ್ತರು, ಸಾ.ಶಿ.ಇ., ಧಾರವಾಡ ಆಯುಕ್ತಾಲಯ ಮತ್ತು ಕಲಬುರಗಿ ಸಾ.ಶಿ.ಇ. ಕಲಬುರಗಿ ಆಯುಕ್ತಾಲಯ ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.
6. ರಾಜ್ಯದ ಎಲ್ಲಾ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾಹಿತಿಗಾಗಿ.
7. ಕಛೇರಿ ಪ್ರತಿ.